ಕಾಡಿನ ಪ್ರಾಣಿ, ಪಕ್ಷಿ, ಗಿಡ, ಮರ, ಬಳ್ಳಿಗಳಿಗೂ ಒಂದು ಭಾಷೆ ಇರಬೇಕಲ್ಲವೇ? ಮೂಕಜೀವ ಎನ್ನುವ ಕಾಡಿನ ಜೀವಸಂಕುಲಗಳು ತಮ್ಮ ಭಾವನೆ ಹೇಗೆಲ್ಲಾ ವ್ಯಕ್ತಪಡಿಸುತ್ತವೆ? ಹೇಗೆ ಅರ್ಥ ಮಾಡಿಕೊಳ್ಳುತ್ತವೆ? ಇದನ್ನು ವಿವರಿಸಿ ಹೇಳುವುದು ಹೇಗೆ ಎಂದು ಯೋಚಿಸುವಾಗ ಗಾಯಗೊಂಡಿದ್ದ ಜಿಂಕೆ ವಿಚಿತ್ರವಾಗಿ ಒಮ್ಮೆ ಕೂಗಿತು. ಯಾಕೆ ಕಿರುಚಿತು ಎಂದು ಗೊತ್ತಾಗಲಿಲ್ಲ.

ಈ ಜಿಂಕೆಯ ರಕ್ತದ ವಾಸನೆ ಈಗ ಕಾಡಿಗೆಲ್ಲಾ ಹಬ್ಬಿ ಹೋಗಿದೆ. ಈ ಹರಡಿದ ವಾಸನೆ ಕೂಡ ಒಂದು ರೀತಿ ಭಾಷಾ ಸಂದೇಶವಲ್ಲವೇ? ಟಿ.ವಿ, ರೇಡಿಯೋ, ಫೋನು ಇಲ್ಲದ ಕಾಡುಪ್ರಾಣಿಗಳು ಹೇಗೆ ಪರಸ್ಪರ ವಿಚಾರಗಳನ್ನು ತಿಳಿದುಕೊಳ್ಳುತ್ತವೆ? ಆಲೋಚಿಸಿದಾಗ ಕಾಡಿನ ಭಾಷೆಯಲ್ಲಿ ಮೂರು ಬಗೆಗಳು ಕಂಡವು. ಅವೇ ಶಬ್ದ, ವಾಸನೆ, ಮತ್ತು ನೋಟ.

ನೋಡಿ ಕಾಡಿನ ಮೊದಲ ಭಾಷೆ ಎಂದರೆ ಅದು ಶಬ್ದ. ಶಬ್ದಕ್ಕಿರುವ ಮುಖ್ಯ ಶಕ್ತಿ ಎಂದರೆ ತುಂಬಾ ದೂರದವರೆಗೂ ಹರಡಿ ಸಾಗುವುದು. ನಿಮಗೆ ಗೊತ್ತಲ್ಲ ಕಾಡಿನ ಮೌನದ ನಡುವೆ ಸಣ್ಣ ಶಬ್ದವೂ ಹೆಚ್ಚು ಸ್ಪಷ್ಟವಾಗಿ ಕೇಳಿಸುತ್ತದೆ. ತನ್ಮೂಲಕ ಯಾವ ಪ್ರಾಣಿ, ಯಾವ ಕಾರಣಕ್ಕೆ ಎಲ್ಲಿಂದ ಕೂಗುತ್ತಿದೆ ಎಂದು ಉಳಿದ ಪ್ರಾಣಿಗಳು ಅರ್ಥ ಮಾಡಿಕೊಳ್ಳಬಲ್ಲವು. ಈ ಕೂಗಿನ ಏರಿಳಿತಗಳಲ್ಲಿ ಉಲ್ಲಾಸ, ಆತಂಕ, ಮಮತೆ, ಪ್ರಣಯ, ಎಚ್ಚರಿಕೆ ಎಂಬ ಹಲವಾರು ಭಾವನೆಗಳೂ ಮಿಳಿತವಾಗಿರುತ್ತವೆ.

ಕಾಡಿನಲ್ಲಿ ಹುಲಿ, ಚಿರತೆ, ಕಾಡು ನಾಯಿಗಳು ಸಂಚರಿಸುವಾಗ ಪ್ರಾಣಭೀತಿಯಿಂದ ಹಲವು ಪ್ರಾಣಿಗಳು, ಪಕ್ಷಿಗಳು ಊಳಿಡುತ್ತವೆ. ಇದನ್ನು ನಾವು ಕಾಲ್ ಎನ್ನುತ್ತೇವೆ. ತಮ್ಮ ಉಳಿವಿಗಾಗಿ ಮಾಡಿಕೊಳ್ಳುವ ಈ ಹೆದರಿಕೆಯ ದನಿಯಿಂದ ಬೇರೆ ಜೀವಿಗಳು ಅಲರ್ಟ್ ಆಗುತ್ತವೆ. ಮತ್ತೊಂದು ಪ್ರಾಣಿಯ ಜೀವ ಉಳಿಸಲು ಅಪಾಯದ ಮುನ್ಸೂಚನೆಯ ಶಬ್ದವನ್ನು ಪ್ರಾಣಿ- ಪಕ್ಷಿಗಳು ಒದರುತ್ತವೆ ಎಂದು ನಾನು ಇಲ್ಲಿಯ ತನಕ ಭಾವಿಸಿದ್ದೆ. ಪ್ರಸಿದ್ಧ ಜೀವ ವಿಜ್ಞಾನಿ ಗೆಳೆಯರು ನನ್ನ ಈ ತಿಳಿವಳಿಕೆಯನ್ನು ತಿದ್ದಿದರು. ಕೆಲ ಪ್ರಾಣಿಗಳು ಕೇವಲ ತಮ್ಮ ಜೀವ ಉಳಿಸಿಕೊಳ್ಳಲು ಮಾತ್ರ ಭೀತಿಯಿಂದ ಕಿರುಚುತ್ತದೆ ವಿನಃ ಉಳಿದವರಿಗೆ ಸಹಾಯ ಮಾಡುವ ಇರಾದೆ ಅವಕ್ಕೆ ಇರೋದಿಲ್ಲ. ನೀವು ತಿಳಿದಂತೆ ಹೆದರಿದ ಪ್ರಾಣಿ, ಪಕ್ಷಿ ಸಂದೇಶ ಕೊಡುತ್ತವೆ ಎಂಬ ಮಾಹಿತಿಯೇ ತಪ್ಪು ಕಲ್ಪನೆ ಎಂದರು. ಅದಕ್ಕೆ ನಾನು,' ತಾಯಿ ಕೋಳಿ ಆಕಾಶದಲ್ಲಿ ಹಾರುವ ಹದ್ದು ನೋಡಿ ತನ್ನ ಮರಿಗಳಿಗೆ ಕೊಡುವ ಸಂದೇಶಕ್ಕೆ ಏನು ಹೇಳುತ್ತೀರಿ. ಆನೆ ಮರಿ ಸಂಕಷ್ಟಕ್ಕೆ ಸಿಲುಕಿ ಕೂಗಿದಾಗ ಸಹಾಯಕ್ಕೆ ಕರಿಗಳ ಹಿಂಡು ಆರ್ಭಟಿಸುತ್ತಾ ಬರುವುದು ಏನು ಹಾಗಾದರೆ? ಕಾಡೆಮ್ಮೆ, ಕರಡಿ, ಹುಲಿ, ಚಿರತೆ, ಸಿಂಹ, ಹೈನಾ, ಕಾಡುನಾಯಿ, ಜಿಂಕೆ, ಜಿರಾಫೆ ಸೇರಿದಂತೆ ಕೆಲ ಪ್ರಾಣಿಗಳು, ಕಾಗೆ ಸೇರಿದಂತೆ ಕೆಲ ಜಾತಿಯ ಪಕ್ಷಿಗಳು ಮಕ್ಕಳ ಆರ್ತನಾದ ಕೇಳಿದಾಗ ಸಹಾಯಕ್ಕೆ ಓಡೋಡಿ ಬರುವುದು ಉಪಕಾರವಲ್ಲವೇ? ಅದೂ ಕಾಲ್ ಅಲ್ಲವೇ?' ಎಂದೆ. ನೀವು ಎಲ್ಲವನ್ನೂ ಗೋಜಲಾಗಿ ಅರ್ಥ ಮಾಡಿಕೊಳ್ಳುತ್ತಿದ್ದೀರಿ ಬಿಡಿ ಅತ್ಲಾಗೆ ಎಂದರು.

ಎರಡನೆಯದು ವಾಸನೆ ಎಂಬ ಭಾಷೆ. ನಾನೀಗ ನೋಡುತ್ತಿರುವ ಗಾಯಗೊಂಡ ಜಿಂಕೆಯ ರಕ್ತದ ಹಸಿ ವಾಸನೆ ಇಡೀ ಕಾಡಿಗೆ ಈಗಾಗಲೇ ಸಂದೇಶ ಭಾಷೆಯಾಗಿ ರವಾನೆಯಾಗಿದೆ. ಕಾಡಿನ ಪ್ರಾಣಿಗಳು ಅತಿ ದೂರದಿಂದಲೇ ವಾಸನೆಯನ್ನು ಸುಲಭವಾಗಿ ಗ್ರಹಿಸುತ್ತವೆ. ಕಾಡಿನೊಳಗೆ ಬೀಸುವ ಗಾಳಿ ಕೂಡ ಭಾಷೆಯ ಸಾಧನವಾಗಿ ಕೆಲಸ ನಿರ್ವಹಿತ್ತದೆ. ಒಂದು ಸತ್ತು ಬಿದ್ದ ಪ್ರಾಣಿಯ ದೇಹ ವಾಸನೆ ಕಾಡಿನಲ್ಲಿ ಮಿಂಚಿನ ಸಂಚಾರ ಹೂಡುತ್ತದೆ. ಮಾಂಸಾಹಾರಿ ಪ್ರಾಣಿಗಳು ಧಾವಿಸಿ ಬರಲು ಇಷ್ಟು ಭಾಷೆ ಸಾಕು. ಹಸಿ ರಕ್ತದ ವಾಸನೆ ಮೊದಲು ತಲುಪುವುದೇ ನೊಣಗಳಿಗೆ.

ಚಿರತೆಗಳು ಉಪಾಯ ಹೆಣೆಯುವುದರಲ್ಲಿ ಎತ್ತಿದ ಕೈ. ದೂರದಿಂದಲೇ ತಮ್ಮ ಮೈಯ ವಾಸನೆ ಜಿಂಕೆಗಳು ಮೂಸಿ, ಗ್ರಹಿಸಿ, ತಪ್ಪಿಸಿಕೊಂಡು ಓಡಿ ಹೋಗುತ್ತವೆ ಎಂದು ಇದಕ್ಕೆ ಗೊತ್ತು. ತಮ್ಮ ಮೈ ವಾಸನೆ ತಗ್ಗಿಸಿಕೊಳ್ಳಲು ಚಿರತೆಗಳು, ಜಿಂಕೆಗಳು ಸೂಸು ಮಾಡಿದ ಜಾಗದಲ್ಲಿ ಹೋಗಿ ಉರುಳಾಡುತ್ತವೆ. ಆಗ ಜಿಂಕೆಗಳ ಮೂತ್ರದ ವಾಸನೆ ಚಿರತೆ ಮೈಗೆ ತಕ್ಕಮಟ್ಟಿಗೆ ವರ್ಗಾವಣೆಯಾಗುತ್ತದೆ. ಈ ತಯಾರಿಯ ನಂತರ ಚಿರತೆಗೆ ಜಿಂಕೆಗಳ ಅತ್ಯಂತ